ಜಾನಕಿಗೆ ಕಿರಿಕಿರಿಯೆನಿಸಿತು.

'ಕರೆದರೆ ಕೇಳಿಸ್ಕೊಳ್ಳುವ ತಾಯಿ ಭಗವತಿ. ಅಂತಾದ್ದರಲ್ಲಿ ಹೊತ್ತಲ್ಲದ ಹೊತ್ನಲ್ಲಿ ಕುಡ್ಕೋಂಡು ಬಂದು ಏನೇನೋ ಹಾಡಿ ದೇವರ ಶಾಪ ತಂದ್ಕೋಬೇಡಿ' ಜಾನಕಿ ಹೆದರಿಸುವ ಧ್ವನಿಯಲ್ಲಿ ದುಮುಗುಟ್ಟಿದಳು. ಬಾಲನ್ ಪಣಿಕ್ಕರ್ ತಕ್ಷಣ ಹಾಡುವುದನ್ನು ನಿಲ್ಲಿಸಿ, ತಲೆಯೆತ್ತಿ ಹೆಂಡತಿಯತ್ತ ನೋಡಿದರು. ಮಗ ಹೂಗಳನ್ನು ತರುತ್ತಿದ್ದ. ಅವನ ಕಪ್ಪು ದೇಹ ಹೂವಿನ ಹಳದಿ ಎಸಳುಗಳಿಗೆ ಹೆಚ್ಚಿನ ಸೌಂದರ್ಯ ತಂದುಕೊಟ್ಟಿತು. ಜಾನಕಿ ಕೆಂಬಟ್ಟೆಗಳನ್ನು ಒಣಗಿದ್ದ ಹಸಿರು ಹುಲ್ಲಿನ ಮೇಲೆ ಒಂದೊಂದಾಗಿ ಒಣ ಹಾಕಿದಳು. ಸಂಪಿಗೆ ಮರದ ಸುತ್ತಲೂ ಬಹಳಷ್ಟು ತೆಯ್ಯಂಗಳು ನಿಂತಿರುವಂತೆ ಪಣಿಕ್ಕರವರಿಗೆ ಭಾಸವಾಯಿತು.

'ಜಾನೂ...' ಎಂದು ಗಟ್ಟಿಯಾಗಿ ಕರೆಯುತ್ತಾ ಪಣಿಕ್ಕರ್ ತಲೆಯನ್ನು ಪುನಃ ಕೆಳ ಹಾಕಿದರು. ಇದು ಹಸಿದ ಹೊಟ್ಟೆಯ ಕರೆಯೆಂದು ಜಾನುವಿಗೆ ಗೊತ್ತಿತ್ತು. ಮಧ್ಯಾಹ್ನದ ಹಸಿವಿಗೆ ಮರಗಣಸೇ ಗತಿ. ಅದಕ್ಕಾಗಿ ಮಣ್ಣಿನೊಳಗಿಂದ ಗೆಬರಿ ತೆಗೆಯಬೇಕು.

'ಹಸಿವಾದರೆ ಬಾವಿಯಿಂದ ಒಂದು ಕೊಡಪಾನ ನೀರು ಸೇದಿ ಹೊಟ್ಟೆ ತುಂಬಾ ಕುಡೀರಿ. ಹಾಗೇನೇ ಸ್ವಲ್ಪ ನೀರನ್ನು ತಲೆ ಮೇಲೂ ಸುರ್ಕೊಳ್ಳಿ. ಕುಡಿದಿದ್ದು ಸ್ವಲ್ಪ ಇಳಿತೈತೆ.'

ಬಾಲನ್ ಪಣಿಕ್ಕರ್ ವಾದಕ್ಕಿಳಿಯದೆ ಮಣೆಯನ್ನು ತಲೆದಿಂಬಾಗಿಲಿಸಿ ಹೊರಗೆ ಮಲಗಿದರು. ಅವನ ದೃಷ್ಟಿ ನೇರವಾಗಿ ಹೂಗಳು ತುಂಬಿದ ಸಂಪಿಗೆಯ ರೆಂಬೆಯಂತೆ ನಿಂತಿದ್ದ ಮಗನತ್ತ ಸರಿಯಿತು. ಹೂವಿನ ಸುಗಂಧವನ್ನು ಸವಿಯುವ ಸಲುವಾಗಿ ಅವರು ಮಗನನ್ನು ಮುಖಕ್ಕೆ ಒತ್ತರಿಸಿ ಹಿಡಿದರು. ಅವನ ಕೈಯಲ್ಲಿದ್ದ ಹೂಗಳು ಒಂದೊಂದಾಗಿ ಅಪ್ಪನ ದೇಹದ ಮೇಲೆ ಉದುರತೊಡಗಿದವು. ಬೆಣ್ಣೆಗಿಂತಲೂ ಮೃದುವಾಗಿ ತಣ್ಣನೆಯ ಎಸಳುಗಳು. ಅವರು ಕಣ್ಣಗಳನ್ನು ಮುಚ್ಚಿದರು. ಎಳೆಯ ಮಗು ತೆವಳುತ್ತಾ ಬಂದು ಅಪ್ಪನ ಎದೆಯ ಮೇಲೆ ಹತ್ತಿ ಕುಳಿತಿತು. ಬೆವರಿನಿಂದ ಪಣಿಕ್ಕರ ದೇಹ ಹಾವಸೆಯಂತೆ ಜಾರುತ್ತಿತ್ತು. ಅಂಗಳದಲ್ಲಿ ಬಿಸಾಡಿದ್ದ ಕಾಗದವನ್ನು ಮಗ ಬಿಡಿಸಿದ. ಹೋಳಿಯ ವೈವಿಧ್ಯಮಯ ಬಣ್ಣವನ್ನು ಹಚ್ಚಿ ಆಹ್ಲಾದಿಂದ ನಿಂತಿರುವ ಹೆಣ್ಣು ಮಗಳ ಚಿತ್ರ! ಅದರ ಅಡಿಯಲ್ಲಿ ಬರೆದ ಅಕ್ಷರಗಳನ್ನು ಅವನು ಜೋಡಿಸಿ ಓದಿದ– ಚೆಲ್ಸಿಯ.

ಹೂಗಳನ್ನು ಹೆಕ್ಕಿ ತೆಗೆದು ಅದರಲ್ಲಿರಿಸಿ ಬಾಡದಿರಲು ನೀರು ಚಿಮುಕಿಸಿದ. ಅನಂತರ ಅವನು ತಂಗಿಯತ್ತ ಓಡಿದ.

ಅಷ್ಟರಲ್ಲಿ ದೊಡ್ಡ ಕಾರೊಂದು ಹೈವೇಯಿಂದ ರೊಯ್ಯನೆ ತಿರುಗಿ ತನ್ನ ಮನೆಯತ್ತ ಓಡಿ ಬರುತ್ತಿರುವುದನ್ನು ಜಾನಕಿ ಕಂಡಳು. ಮರಗೆಣಸನ್ನು ಗೆಬರಿ ತೆಗೆಯುತ್ತಿದ್ದ ಮಕ್ಕಳು ಎದ್ದು ನಿಂತರು. ದೂಳು ಚಿಮ್ಮಿಸುತ್ತಾ ಅಡ್ಡಾದಿಡ್ಡಿಯಾಗಿ ರಸ್ತೆ ಗುಂಡಿಯಲ್ಲಿ ಎದ್ದು ಬಿದ್ದು ಕುಲುಕಾಡುತ್ತಾ ಬರುತ್ತಿದ್ದ ಕಾರನ್ನು ಕಂಡು ಕೊಂಚ ಗಾಬರಿಯಾದರು. ಅದರ ಅಂತಸ್ತಿಗೆ ತಕ್ಕುದಾದ ರಸ್ತೆ ಇದಲ್ಲವೆಂದು ಜಾನಕಿಗೆ ಅನಿಸಿತು. ಕಾರು ಬಾವಿಕಟ್ಟೆಯ ಮುಂದೆ ಬಂದು ನಿಂತು ಹಾರ್ನ್ ಹೊಡೆದು ಸುಮ್ಮನಾಯಿತು.

ಬೆಚ್ಚಿ ಎಚ್ಚರಗೊಂಡ ಪಣಿಕ್ಕರ್ ಮಗುವನ್ನು ನೆಲದ ಮೇಲೆ ಕುಳ್ಳರಿಸಿ ಹೊರಬಂದು ನಿಂತರು. ಬಾವಿ ಕಟ್ಟೆಯ ಬಳಿ, ಬಾವಿ ನೀರಿಗಿಂತಲೂ ನಿರ್ಮಲವಾಗಿತ್ತು ಆ ವಿದೇಶಿ ಕಾರು. ಮತ್ತಿನ ಭರದಲ್ಲಿ ತನಗೆ ಹಾಗನ್ನಿಸಿತ್ತೇ ಎಂದು ಅನುಮಾನಿಸಿದರು ಪಣಿಕ್ಕರ್. ಅದು ಕೆಲವೇ ನಿಮಿಷಗಳು ಮಾತ್ರ. ಸ್ವಲ್ಪ ಹೊತ್ತಿನ ನಂತರ ನಂಬಿಕೆ ಬಂತು. ಪಣಿಕ್ಕರಿಗೆ ಕುಡಿದ ಅಮಲೆಲ್ಲಾ ಇಳಿದಂತಾಯಿತು. ದೇಹ ಜೋಮುಗಟ್ಟಿತು.

ಕಾರಿನ ಬಾಗಿಲುಗಳು ರೆಕ್ಕೆಯಂತೆ ಮೇಲಕ್ಕೇರಿದವು. ಅದರೊಳಗಿನಿಂದ ಬಿಳಿಯ ತೊಗಲಿನ ವಿದೇಶಿಯ ಹೊರಕ್ಕಿಳಿದ. ಜೀನ್ಸ್ ಮತ್ತು ಟೀ ಶರ್ಟು ಅವನ ವೇಷ ಭೂಷಣ. ಆತನಲ್ಲದೆ ಮತ್ತು ಮೂವರು ಕಾರಿನಲ್ಲಿದ್ದಾರೆಂದು ಜಾನಕಿ ಪತ್ತೆ ಹಚ್ಚಿದಳು.